**ದಿನಾಂಕಃ 20/01/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರಿಂದಃ**

3. ನನಗೆ ಠಾಣೆಯಿಂದ ಟಾಟಾ ಹಿಟಾಚಿ ಕೌಂಟರ್ ವೆಡ್ ನ್ನು ಅಮಾನತ್ತು ಪಡಿಸಿಕೊಂಡಿದ್ದೇವೆ ಎಂದು ಕರೆಮಾಡಿದ್ದರು. ಆ ಪ್ರಕಾರ ನಾನು ಠಾಣೆಗೆ ಹೋಗಿ ನನ್ನದೇ ಎಂದು ಗುರುತಿಸಿದೆ. ಪೊಲೀಸರು ನಂತರ ಏನೂ ಮಾಡಲಿಲ್ಲ, ನನ್ನನ್ನು ವಾಪಸ್ಸು ಕಳುಹಿಸಿದರು.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

4. ದಿಃ23/09/2019 ರಂದು ಮಧ್ಯಾಹ್ನ 1.00 ಗಂಟೆಗೆ ಸುರಗಳ್ಳಿಯ ಅಣ್ಣಯ್ಯರೆಡ್ಡಿಯವರ ಮನೆಯ ಬಳಿಗೆ ಬಂದು ನೋಡಲಾಗಿ ನಾವು ನಿಲ್ಲಿಸಿದ್ದ ಸ್ಥಳದಲ್ಲಿ ನಮ್ಮ ಹಿಟಾಚಿ ವಾಹನ ಇರಲಿಲ್ಲ. ಗಾಬರಿಯಾದ ನಾನು ಅಲ್ಲಿಯೇ ಇದ್ದ ಅಣ್ಣಯ್ಯರೆಡ್ಡಿ ಹಾಗೂ ಅವರ ಮನೆಯವರುಗಳನ್ನು ಹಾಗೂ ಅಕ್ಕಪಕ್ಕದ ಜಮೀನಿನಲ್ಲಿದ್ದವರನ್ನು ನಮ್ಮ ಹಿಟಾಚಿ ವಾಹನದ ಬಗ್ಗೆ ವಿಚಾರಿಸಲಾಗಿ ಕಳೆದ ಸುಮಾರು 8-10 ದಿವಸಗಳ ಹಿಂದೆ ನಮ್ಮೂರಿನ ಎಸ್.ದೇವೇಗೌಡ ಹಾಗೂ ಅವರ ಮಕ್ಕಳಾದ ಅಭಿಲಾಷ್ ಮತ್ತು ಸಂದೀಪ್ ರವರು ನಮ್ಮ ಮನೆಯ ಬಳಿ ಬಂದು ಹಿಟಾಚಿ ವಾಹನವನ್ನು ತೆಗೆದುಕೊಂಡು ಹೋಗುತ್ತಿದ್ದರು ಎಂದು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿ. ಅದಕ್ಕೆ ಎಸ್.ದೇವೇಗೌಡ ಮತ್ತು ಅವರ ಮಕ್ಕಳು ಶಶಿಧರಬಾಬು ರವರು ಹೃದಯ ಕಾಯಿಲೆಯಿಂದ ಬಳಲುತ್ತಾ ಸತ್ತುಹೋಗಿದ್ದಾರೆ, ಈ ಹಿಟಾಚಿಯ ದಾಖಲಾತಿಗಳು ತನ್ನ ಹೆಸರಿನಲ್ಲಿಯೇ ಇರುತ್ತವೆಂದು ತಿಳಿಸಿ ಯಾರೋ ಮುಸ್ಲಿಂ ಜನರನ್ನು ಕರೆಂಕೊಂಡು ಬಂದು 25 ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡಿದ್ದು ಖರೀದಿದಾರರು ಲಾರಿಯಲ್ಲಿ ನಿಮ್ಮ ಹಿಟಾಚಿ ವಾಹನವನ್ನು

ತೆಗೆದುಕೊಂಡು ಹೋದರು ಎಂದು ತಿಳಿಸಿದರು ಎಂದರೆ ಸರಿ. ಸುರಗಳ್ಳಿ ಗ್ರಾಮದಲ್ಲಿ ಜನರುಗಳನ್ನು ವಿಚಾರ ಮಾಡಲಾಗಿ, ಎಸ್.ದೇವೆಗೌಡ ಮತ್ತು ಅವರ ಮಕ್ಕಳು ನನಗೆ ಮೋಸ ಮತ್ತು ವಂಚನೆ ಮಾಡುವ ಉದ್ದೇಶದಿಂದ ನಾನು ಸತ್ತುಹೋಗಿರುತ್ತೇನೆಂದು ಮತ್ತು ಹಿಟಾಚಿಯ ವಾಹನದ ದಾಖಲಾತಿಗಳು ಅವರ ಹೆಸರಿನಲ್ಲಿ ಇರುತ್ತವೆಂದು ಸುಳ್ಳು ಸುದ್ದಿ ಹಬ್ಬಿಸಿ, ಮೇಲ್ಕಂಡ ನಮ್ಮ ಹಿಟಾಚಿ ವಾಹನವನ್ನು ಮಾರಾಟ ಮಾಡಿರುತ್ತಾರೆ ಎಂಬುದಾಗಿ ತಿಳಿಸಿದರು ಎಂದರೆ ಸರಿ. ನಮ್ಮ ಹಿಟಾಚಿ ವಾಹನವ ಆರೆಂಜ್ ಬಣ್ಣದಿಂದ ಕೂಡಿದ್ದು, ಬಕೇಟ್ ಮತ್ತು ಚೈನ್ ಚಕ್ರಗಳು ಸೇರಿದಂತೆ ಅಂಡರ್ ಚಾರ್ಸಿ ಕಪ್ಪು ಬಣ್ಣದಿಂದ ಕೂಡಿತ್ತು ಎಂದರೆ ಸರಿ. ನಾನು ಸತ್ತು ಹೋಗಿರುತ್ತೇನೆಂದು ಹಾಗೂ ನಮ್ಮ ಹಿಟಾಚಿ ವಾಹನದ ದಾಖಲಾತಿಗಳು ತಮ್ಮ ಹೆಸರಿನಲ್ಲಿರುತ್ತವೆ ಎಂದು ಸುಳ್ಳು ಮಾಹಿತಿ ಹೇಳಿ, ನನಗೆ ವಂಚಿಸುವ ಉದ್ದೇಶದಿಂದ ಮೇಲ್ಕಂಡ ನಮ್ಮ ಹಿಟಾಚಿ ವಾಹನವನ್ನು ಬೇರೆಯವರಿಗೆ ಮಾರಾಟ ಮಾಡಿ ನನಗೆ ಮೋಸ ಮಾಡಿರುವ ಸುರಗಳ್ಳಿ ಗ್ರಾಮದ ಎಸ್.ದೇವೆಗೌಡ ಮತ್ತು ಅವರ ಮಕ್ಕಳ ವಿರುದ್ಧ ಕಾನೂನು ರೀತಿಯಲ್ಲಿ ಕ್ರಮ ಕೈಗೊಂಡು ನಮ್ಮ ಬಾಬ್ತು ಹಿಟಾಚಿ ವಾಹನವನ್ನು ಕೊಡಿಸಿಕೊಡಬೇಕೆಂದು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿ.

5. ನಾನು ದೂರು ಕೊಟ್ಟ ಹಿನ್ನೆಲೆಯಲ್ಲಿ ದಿಃ30/09/2019 ರಂದು ಪೊಲೀಸರು ಬೆಳಿಗ್ಗೆ 9.15 ಗಂಟೆಗೆ ನಾನು ಹಿಟಾಚಿ ವಾಹನವನ್ನು ನಿಲ್ಲಿಸಿದ್ದ ಜಾಗಕ್ಕೆ ಬಂದಿದ್ದರು ಎಂದರೆ ಸರಿ. ಜಾಗವನ್ನು ನಾನೇ ತೋರಿಸಿರುತ್ತೇನೆ ಎಂದರೆ ಸರಿ. ಪೊಲೀಸರು ಬೆಳಿಗ್ಗೆ 9.15 ರಿಂದ 10.00 ಗಂಟೆಯವರೆಗೆ ಸ್ಥಳ ಮಹಜರ್ ಜರುಗಿಸಿದರು, ಸದರಿ ಮಹಜರ್ ಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ.

6. ದಿಃ 25/02/2022 ರಂದು ಪೊಲೀಸರು ನನಗೆ ಕರೆಮಾಡಿ ನನ್ನ ಹಿಟಾಚಿ ವಾಹನದ ಕೌಂಟರ್ ವೆಡ್ ಸಿಕ್ಕಿದೆ ಎಂದು ತಿಳಿಸಿದ್ದರು ಎಂದರೆ ಸರಿ. ನಾನು ಠಾಣೆಗೆ ಹೋಗಿ ಅದನ್ನು ಗುರುತಿಸಿದೆ ಎಂದರೆ ಸರಿ. ನಂತರ ವಿಚಾರ ಮಾಡಲಾಗಿ ಕಳೆದ ಸುಮಾರು ಎರಡೂವರೆ ವರ್ಷಗಳ ಹಿಂದೆ ಅಂದರೆ ದಿಃ13/09/2019 ರಂದು ಸುರಗಳ್ಳಿ ಗ್ರಾಮದ ಎಸ್.ದೇವೇಗೌಡ ಅಲಿಯಾಸ್ ಸ್ವಾಮಣ್ಣಿ ಬಿನ್ ಲೇಟ್ ಸಣ್ಣೇಗೌಡ

ಎಂಬುವವರು ಗುಜರಿ ವ್ಯಾಪಾರಿಗಳಾದ ಮೈಸೂರಿನ ಸೈಯದ್ ನಯಾಸ್ ಅಹಮದ್ ಹಾಗೂ ಸೈಯದ್ ಜಾವೇದ್ ಮತ್ತು ಇಷ್ತಿಕಾರ್ ಅಹಮದ್ ಎಂಬುವವರಿಗೆ ಸದರಿ ಹಿಟಾಚಿ ವಾಹನದ ದಾಖಲಾತಿಗಳು ತನ್ನ ಹೆಸರಿನಲ್ಲಿದ್ದು ಅದರ ಮಾಲೀಕ ತಾನೇ ಎಂದು ಸುಳ್ಳು ಹೇಳಿ ಸದರಿ ಹಿಟಾಚಿ ವಾಹನವನ್ನು ಇ-ಸ್ಟಾಂಪ್ ಪತ್ರದಲ್ಲಿ ಶುದ್ಧಕ್ರಯ ಒಪ್ಪಂದ ಪತ್ರದ ಮುಖಾಂತರ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.3** ಎಂದು ಗುರುತಿಸಲಾಯಿತು. ಮೇಲ್ಕಂಡ ಮೂರು ಜನ ಗುಜರಿ ವ್ಯಾಪಾರಿಗಳು ಸದರಿ ಹಿಟಾಚಿ ವಾಹನವನ್ನು ಮೈಸೂರಿಗೆ ತೆಗೆದುಕೊಂಡು ಹೋಗಿ ಹಿಟಾಚಿ ವಾಹನನದ ಬಿಡಿ ಭಾಗಗಳನ್ನು ಗ್ಯಾಸ್ ಕಟಿಂಗ್ ನಿಂದ ಕತ್ತರಿಸಿ ಗುಜರಿ ಲೆಕ್ಕದಲ್ಲಿ ಮಾರಾಟ ಮಾಡಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.3(ಎ)** ಎಂದು ಗುರುತಿಸಲಾಯಿತು. ಸದರಿ ಹಿಟಾಚಿ ವಾಹನದ ಕೌಂಟರ್ ವೆಡ್ (ಗಟ್ಟಿಯಾದ ಭಾಗವು) ಉಪಯೋಗಕ್ಕೆಬಾರದೆ ಇದ್ದುದ್ದರಿಂದ ಹಾಗೂ ಗುಜರಿಯವರು ತೆಗೆದುಕೊಳ್ಳದ ಕಾರಣ ಅದನ್ನು ಬೆಟ್ಟದಪುರ ಪೊಲೀಸ್ ಠಾಣೆಯ ಆವರಣಕ್ಕೆ ತಂದು ಹಾಜರುಪಡಿಸಿದ್ದರು ಎಂದರೆ ಸರಿ. ಮಹಜರ್ ಮುಖಾಂತರ ಅಮಾನತ್ತು ಪಡಿಸಿಕೊಂಡಿರುವುದಾಗಿ ತಿಳಿಸಿದರು ಎಂದರೆ ಸರಿ. ನಾನು ಠಾಣೆಗೆ ದೂರು ನೀಡುವಾಗ ನಾನು ನಿಲ್ಲಿಸಿದ್ದ ಸ್ಥಳದಲ್ಲಿ ನನ್ನ ಬಾಬ್ತು ಹಿಟಾಚಿ ವಾಹನ ಇಲ್ಲದಿದ್ದರಿಂದ ಗಾಬರಿಯಲ್ಲಿದ್ದು ಸುರಗಳ್ಳಿ ಗ್ರಾಮದ ದೇವೇಗೌಡ ಅಲಿಯಾಸ್ ಸೋಮಣ್ಣನು ಉಡಾಫೆಯಿಂದ ಮಾತನಾಡಿದ್ದುದ್ದರಿಂದ ದೇವೇಗೌಡ ಮತ್ತು ಅವರ ಮಕ್ಕಳಾದ ಅವಿನಾಶ್ ಮತ್ತು ಸಂದೀಪ್ ರವರು ಸೇರಿ ನನ್ನ ಹಿಟಾಚಿ ವಾಹನವನ್ನು ಬೇರೆಯವರಿಗೆ ಮಾರಾಟ ಮಾಡಿ ಮೋಸ ಮಾಡಿರುತ್ತಾರೆಂದು ನನ್ನ ದೂರಿನಲ್ಲಿ ತಿಳಿಸಿದ್ದೆನು ಎಂದು ಮುಂದುವರೆದ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಆದರೆ ಈ ಕೃತ್ಯದಲ್ಲಿ ದೇವೇಗೌಡ ಅಲಿಯಾಸ್ ಸೋಮಣ್ಣರವರ ಮಕ್ಕಳಾದ ಅವಿನಾಶ್ ಮತ್ತು ಸಂದೀಪ್ ರವರು ಪಾಲ್ಗೊಂಡಿರುವುದಿಲ್ಲವೆಂದು ತಿಳಿಯಿತು ಎಂದು ಹೇಳಿಕೆ ನೀಡಿಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.3(ಬಿ)** ಎಂದು ಗುರುತಿಸಲಾಯಿತು. ನಾನು ಹೃದಯ ಕಾಯಿಲೆಯಿಂದ ಸತ್ತು ಹೋಗಿರುತ್ತೇನೆಂದು ಹಾಗೂ ಸದರಿ ಹಿಟಾಚಿ ವಾಹನದ

ದಾಖಲಾತಿಗಳು ತನ್ನ ಹೆಸರಿನಲ್ಲಿದ್ದು, ಅದರ ಮಾಲೀಕ ತಾನೇ ಎಂದು ಸುಳ್ಳು ಹೇಳಿ ಮೇಲ್ಕಂಡವರಿಗೆ ಮಾರಾಟ ಮಾಡಿ ಮೋಸ ಮಾಡಿರುವ ಸುರಗಳ್ಳಿ ಗ್ರಾಮದ ದೇವೇಗೌಡ ಅಲಿಯಾಸ್ ಸೋಮಣ್ಣ ಎಂಬುವವರ ವಿರುದ್ಧ ಮುಂದಿನ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಈ ದಿವಸ ನನ್ನ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿ.

**ಪಾಟೀ ಸವಾಲುಃ**ಆರೋಪಿತರ ಪರ ವಕೀಲರು ಸಮಯಕೋರಿದ್ದು ಸಮಯ ನೀಡಲಾಯಿತು.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**